The present per capita supply works out to 10 GPCD 45(LPCD).

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಶ್ರೀನಿವಾಸಯ್ಯ ಮತ್ತು ವಕೀಲರೂ ಸದಸ್ಯರೂ ಆದಂಥ ವೆಂಕಟರಾಮಯ್ಯನವರು ಬೋರ್‌ವೆಲ್‌ಗಳನ್ನು ಹಾಕಿಸಬೇಕೆಂದು ಹೇಳಿದ್ದಾರೆ. ಕೋಲಾರ ಟೌನಿನಲ್ಲಿ ಭೂಗರ್ಭ ಇಲಾಖೆಯ ವಿಜ್ಞಾನಿಗಳ ಸಲಹೆ ಪಡೆದು ಬೋರ್‌ವೆಲ್‌ಗಳನ್ನು ಹಾಕಿಸಿ ಕೊಟ್ಟಿದ್ದಾರೆ. ಇತ್ತೀಚೆಗೆ ಭೂಜಲ ಪ್ರಮಾಣ ಕಡಿಮೆಯಾಗಿದೆ. ಊರಿನ ಪಕ್ಕದಲ್ಲಿ ಪೂರ್ವ ಭಾಗದಲ್ಲಿ ಕೆರೆಯಂ ಒಳಗೆ ಬೋರ್‌ವೆಲ್‌ಗಳನ್ನು ಹಾಕಿಸಿದ್ದಾರೆ. ಅಲ್ಲಿಂದ ಮಡ್ಡಿ ನೀರು ಬರುತ್ತಿದೆ. ಶ್ರೀನಿವಾಸಪುರ ಮತ್ತು ಹಮ್ಮೇರಹಳ್ಳಿಯಲ್ಲಿಯೂ ಕೂಡ ಬೋರ್‌ವೆಲ್‌ಗಳನ್ನು ಹಾಕಿ ನೀರು ಸರಬರಾಜು ಮಾಡುತ್ತಿದ್ದಾರೆ. ಮಡ್ಡಿ ನೀರನ್ನು ೩-೪ ಗಂಟೆಗಳ ಕಾಲ ತಡೆದು ನಂತರ ಸರಬರಾಜು ಮಾಡಬೇಕು, ಈ ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

(vi) ಹರಿಹರದ ಕುಡಿಯುವ ನೀರಿನ ತೊಂದರೆ

ಶ್ರೀ ಬಿ. ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಹರಿಹರ ಟೌನ್ ಬಹಳ ಪುಣ್ಯವಾದ ಸ್ಥಳ, ಈ ಪಟ್ಟಣ ತುಂಗಭದ್ರಾ ನದಿಯಂ ದಡದಲ್ಲಿದೆ. ಇತ್ತೀಚೆಗೆ ಇಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದ್ದು, ಜಾಂಡೀಸ್ ಕಾಯಿಲೆ ಎಲ್ಲಾ ಕಡೆಯೂ ಕಾಣುತ್ತಿದೆ. ಸರ್ಕಾರದವರು ಶುದ್ಧವಾದ ನೀರನ್ನು ಹರಿಹರ ಪಟ್ಟಣದ ಜನತೆಗೆ ಒದಗಿಸುವ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಸರ್ಕಾರ ನೀರು ಸರಬರಾಜು ವಿಚಾರದಲ್ಲಿ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸಬೇಕೆಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಯವರು)ಮಾನ್ಯ ಅಧ್ಯಕ್ಷರೇ, ಹರಿಹರ ಪಟ್ಟಣಕ್ಕೆ ತುಂಗಭದ್ರಾ ನದಿ ಮೂಲದಿಂದ ಶುದ್ಧ ನೀರನ್ನು ಪೂರೈಸಲಾಗುತ್ತಿದೆ. ೧೯೬೧ನೇ ಇಸವಿಯಲ್ಲಿ ನಿರೀಕ್ಷಿಸಲಾದ ೫೦,೦೦೦ ಜನ ಸಂಖ್ಯೆಯನ್ನು ಪರಿಗಣಿಸಿ ತಯಾರಿಸಲಾದ ಈ ಯೋಜನೆಯು ೧೯೭೭ರಲ್ಲಿ ಕಾರ್ಯಗತಗೊಳಿಸಲಾಯಿತು. ಇದರಲ್ಲಿ ದಿನಂಪ್ರತಿ ಪ್ರತಿ ಪ್ರಜೆಗೆ ೨೦ ಗ್ಯಾಲನ್ ನೀರನ್ನು ಪೂರೈಸಲು ಯೋಜಿಸಲಾಗಿತ್ತು.

ಪಟ್ಟಣದ ಈಗಿನ ಜನಸಂಖ್ಯೆ ಸುಮಾರು ೬೦,೦೦೦ ದಿನಂಪ್ರತಿ ಪ್ರತಿ ಪ್ರಜೆಗೆ ೨೦ ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಈ ಪಟ್ಟಣವು ಕೈಗಾರಿಕಾ ಕ್ಷೇತ್ರದಲ್ಲಿ ತೀವ್ರವಾಗಿ ಅಭಿವೃದ್ಧಿಯಾದುದರಿಂದಲೂ ಮತ್ತು ಜನ ಸಂಖ್ಯೆ ಗಣನೀಯವಾಗಿ ಏರಿದುದರಿಂದಲೂ ಮೇಲಿನ ನೀರು ಸರಬರಾಜು ಯೋಜನೆಯಿಂದ, ಪಟ್ಟಣಕ್ಕೆ ಸಾಕಷ್ಟು ಪ್ರಮಾಣದಲ್ಲಿ ಮತ್ತು ಪಟ್ಟಣದ ಎಲ್ಲಾ ಭಾಗಗಳಿಗೂ ಸಮಾನಾಗಿ ಪೂರೈಕೆಯಾಗುತ್ತಿಲ್ಲ. ಪಟ್ಟಣದಲ್ಲಿ ಸಾಕಷ್ಟು ಜಲಸಂಗ್ರಹಾಗಾರಗಳು ಇಲ್ಲದಿರುವುದೇ ಇದಕ್ಕೆ ಕಾರಣ. ಆದ್ದರಿಂದು ಪುರಸಭೆಯವರ ಮನವಿ ಮೇರೆಗೆ, ಪಟ್ಟಣದ ಇಂದಿರಾ ನಗರ ಬಡಾವಣೆಯಲ್ಲಿಯೂ ಮತ್ತು ಬಂಗ್ಲಾದೇಶ ಬಡಾವಣೆಯಲ್ಲಿಯೂ ಒಂದೊಂದು ಎರಡು ಲಕ್ಷ ಗ್ಯಾಲನ್ ಸಾಮರ್ಥ್ಯದ ಒಟ್ಟು ಎರಡು ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಈ ಕೆಲಸದ ಅಂದಾಜು ೨೩ ಲಕ್ಷ ರೂಪಾಯಿಗಳು. ಪುರಸಭೆಯವರು ಈ ಕೆಲಸಕ್ಕಾಗಿ ೩ ಲಕ್ಷ ರೂಪಾಯಿಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪಾವತಿ ಮಾಡಿರುತ್ತಾರೆ. ಅಂದಾಜನ್ನು ಮಂಡಲಿಯೂ ಈಗಾಗಲೇ ಅನುಮೋದಿಸಿದ್ದು, ಕೆಲಸಕ್ಕೆ ಗುತ್ತಿಗೆದಾರರನ್ನು ಗೊತ್ತುಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಪುರಸಭೆಯವರು ಬಾಕಿ ಹಣ ಶೀಘ್ರವೇ ಪೂರೈಸಿದಲ್ಲಿ, ಈ ಕೆಲಸವನ್ನು ಒಂದು ವರ್ಷದೊಳಗಾಗಿ ಪೂರ್ಣಗೊಳಿಸಲಾಗುವುದು.

ಹರಿಹರ ಪಟ್ಟಣಕ್ಕೆ ನೀರು ಸರಬರಾಜನ್ನು ಇನ್ನೂ ಅಭಿವೃದ್ಧಿಪಡಿಸಲು, ಮಂಡಳಿಯು ೪೩ ಲಕ್ಷ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸಿದೆ. ಈ ಅಂದಾಜು ಮಂಡಳಿಯ ಕೇಂದ್ರ ಕಛೇರಿಯಲ್ಲಿ ಪರಿಶೀಲನೆಯಲ್ಲಿದೆ. ಈ ಅಂದಾಜಿನಲ್ಲಿ ಪಟ್ಟಣಕ್ಕೆ ದಿನಕ್ಕೆ ೨ ದಶಲಕ್ಷ ಗ್ಯಾಲನ್ ನೀರು ಪೂರೈಕೆ ಮಾಡಲು ಉದ್ದೇಶಿಸಲಾಗಿದೆ. ಇದಕ್ಕೆ ಬೇಕಾದ ಹೆಚ್ಚುವರಿ ಪಂಪಿಂಗ್ ಮೆಷಿನರಿಗಳನ್ನು, ಜಲ ಶುದ್ಧೀಕರಣಾಗಾರವನ್ನು ಮತ್ತು ಇತರ ಕೆಲಸಗಳನ್ನು ಅಂದಾಜಿನಲ್ಲಿ ಸೇರಿಸಲಾಗಿದೆ, ಯೋಜನೆ

ಯನ್ನು ಜೀವವಿಮಾ ಸಂಸ್ಥೆಯ ನೆರವಿನಿಂದ, ಒನೇ ಪಂಚವಾರ್ಷಿಕ ಯೋಜನೆಯಲ್ಲಿ, ಕಾರ್ಯಗತ ಗೊಳಿಸಲು ಉದ್ದೇಶಿಸಲಾಗಿದೆ. ಪುರಸಭೆಯವರ ಒಪ್ಪಿಗೆ ತರಾವನ್ನು ಮಂಡಳಿಯಂ ನಿರೀಕ್ಷಿಸುತ್ತಿದ್ದು, ಅದು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

(vii) ಹಿರಿಯೂರಿನ ಕೆಲವು ಹಳ್ಳಿಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ

ಶ್ರೀ ಆರ್. ರಾಮಯ್ಯ.—ಅಧ್ಯಕ್ಷರೇ, ನನ್ನ ಕ್ಷೇತ್ರ ಹಿರಿಯೂರಿನಲ್ಲಿ ೩೨ ಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ವಿದ್ಯುದ್ದೀಕರಣವಾಗದೆ ಕತ್ತಲಲ್ಲಿ ಜನ ಜೀವನ ಸಾಗುತ್ತದೆ. ಒಂದು ಪಂಚಾಯಿತಿಗೆ ವಿದ್ಯುತ್ ಸರಬರಾಜಾದಲ್ಲಿ ಅದಕ್ಕೆ ಹೊಂದಿಕೊಂಡಿರುವ ನೆರೆ ಗ್ರಾಮಗಳಿಗೆ ವಿದ್ಯುತ್ ದೊರೆಯದಿರುವುದಂ ಆ ಜನಕ್ಕೆ ಸಂಶಯ ಬಂದಿರುತ್ತದೆ. ಹೀಗಾಗಿ ಈ ಹಳ್ಳಿಗಳೆಲ್ಲಾ ಕತ್ತಲಲ್ಲಿ ಉಳಿದಿವೆ. ಸಂಬಂಧಿಸಿದ ಅಧಿಕಾರಿ ತೀರಾ ಪಂಂದಗತಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಜನ ಅಲೆದು ನಿರುತ್ಸಾಹಿಗಳಾಗಿದ್ದಾರೆ. ವ್ಯಯಂಂಕ್ಕೂ ಬಿಟ್ಟು ಹೋಗಿರುವ ಈ ಹಳ್ಳಿಗಳಿಗೆ ವಿದ್ಯುದ್ದೀಕರಣವಾಗಿ ಆ ಜನರು ಬೆಳಕಿನ ಪರಿಸರವನ್ನು ಅನುಭವಿಸಲು ಅವಕಾಶ ಕಲ್ಪಿಸಲು ಕೋರುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಗ್ರಾಮಗಳಿಗೆ ವಿದ್ಯುತ್ ಒದಗಿಸಲಂ ಎರಡು ಯೋಜನೆಗಳಿವೆ.

(೧) ಗ್ರಾಮಾಂತರ ವಿದ್ಯುದ್ದೀಕರಣ ಯೋಜನೆ (ಆರ್.ಇ.ಸಿ.)

(೨) ಮಂಡಳಿಯ ವಿದ್ಯುದ್ದೀಕರಣ ಕಾರ್ಯಕ್ರಮ.

ಮಂಡಳಿಯಲ್ಲಿ ಗ್ರಾಮೀಣ ವಿದ್ಯುದ್ದೀಕರಣಕ್ಕೆ ಸೇರಬೇಕಾದರೆ ಗ್ರಾಮಗಳು ಈ ಕೆಳಕಂಡ ನಿಯಮಂಗಳನ್ನು ಪಾಲಿಸಬೇಕು.

(೧) ಗ್ರಾಮಗಳು ಮಂಡಳಿಯ ಆಗಲೇ ಇರುವ ಹೈಟೆನ್‌ಷನ್ ಲೈನ್‌ಗಳಿಂದ ಒಂದೂವರೆ ಕಿಲೋಮೀಟರ್ ವ್ಯಾಪ್ತಿ ಒಳಗೆ ಇರಬೇಕು.

(೨) ಗ್ರಾಮಂಗಳ ವಿದ್ಯುದ್ದೀಕರಣಕ್ಕೆ ಬೇಕಾಗುವ ವಿನಿಯೋಗಿಸಿದ ಹಣದ ಮೇಲೆ ಶೇ. ೫ರಷ್ಟು ಮಲೆನಾಡು ಪ್ರದೇಶದಲ್ಲೂ, ಶೇಕಡಾ ಏಳೂವರೆಯಷ್ಟು ಮೈದಾನ ಪ್ರದೇಶದಲ್ಲೂ ವರಮಾನ ವರ್ಷದಲ್ಲಿ ಬರುವಂತಿರಬೇಕು.

(೩) ಆ ಗ್ರಾಮಂಗಳು ಸರ್ಕಾರದ ಅನುಮೋದನೆ ಪಡೆದಿರಬೇಕು.

೧೯೭೧ರ ಜನಗಣತಿಯಂತೆ ಹಿರಿಯೂರಿನಲ್ಲಿ ಇರುವ ಗ್ರಾಮಂಗಳ ಸಂಖ್ಯೆ: ೧೪೬
ಅವುಗಳಲ್ಲಿ ೨೮.೨.೮೫ರವರೆಗೆ ವಿದ್ಯುತ್ ಸರಬರಾಜು ಆಗಿರುವ ಸಂಖ್ಯೆ: ೧೩೯

೭

ಈ ೭ ಗ್ರಾಮಂಗಳಲ್ಲಿ ೩ ಗ್ರಾಮಂಗಳನ್ನು ೧೯೮೪-೮೫ರಲ್ಲಿ ವಿದ್ಯುತ್ ಸರಬರಾಜಿಗೆ ಸೇರಿಸಲಾಗಿದೆ. ಉಳಿದ ೪ ಗ್ರಾಮಂಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಂಪನ್ಮೂಲಗಳಿಗೆ ಅನುಗುಣವಾಗಿ ವಿದ್ಯುದ್ದೀಕರಣ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

(VIII) ಕೊಕ್ಕರ್ಣಿಯ ಕುಮುದಾ ಉಪಾಶಂಕರ ಶಿಕ್ಷಕರ ತರಬೇತಿ ಸಂಸ್ಥೆಯ ಶಿಕ್ಷಕರಿಗೆ ವೇತನವನ್ನು ಕೊಡುವ ಬಗ್ಗೆ

ಶ್ರೀ ಬಸವರಾಜ್(ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೇ, ಬ್ರಹ್ಮಾವರ ಮತದಾರ ಕ್ಷೇತ್ರದ ಕೊಕ್ಕರ್ಣಿಯಲ್ಲಿ ಕುಮುದಾ ಉಪಾಶಂಕರ ಶಿಕ್ಷಕರ ತರಬೇತಿ ಸಂಸ್ಥೆ ಇದೆ. ಈ ಸಂಸ್ಥೆಯಲ್ಲಿ ಕಳೆದ ೧೫ ವರ್ಷಗಳಿಂದ ಪಾಯಂ ಪದವೀಧರ ಶಿಕ್ಷಕರಾಗಿ ೧೫ ಜನ ಸೇವೆ ಸಲ್ಲಿಸುತ್ತಿದ್ದಾರೆ. ಆದರೆ, ಅವರಿಗೆ ಕಳೆದ ನವೆಂಬರ್ ೧೯೮೪ ರಿಂದ ವೇತನವನ್ನು ಶಿಕ್ಷಣ ಇಲಾಖೆ ಕಮಿಷನರ್‌ರವರು ತಡೆಹಿಡಿದಿರುತ್ತಾರೆ